

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**

ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೫೧

ಏಪ್ರಿಲ್ ೧ರಂದು ವಿರಜಾನಂದರು ಕೆಳಗಿಳಿಯುವ ದಿನವಲ್ಲ. ಕೊಠಡಿಯ ಮಂಚದಲ್ಲಿ ಕುಳಿತು ಕಿಟಕಿಯಿಂದ ದರ್ಶನ ನೀಡುವ ದಿನ. ಕೆಳಗಿನ ಮೈದಾನದಲ್ಲಿ ಭಕ್ತರೆಲ್ಲ ಯಾವಾಗ ಮಹಾರಾಜರ ಕೊಠಡಿಯ ದಕ್ಷಿಣ ದಿಕ್ಕಿನ ಕಿಟಕಿಯು ತೆರೆದುಕೊಳ್ಳುವುದೋ ಎಂದು ಕಾಯುತ್ತಿದ್ದರು. ಇತ್ತ ವಿರಜಾನಂದರು ಸೇವಕರೊಡಗೂಡಿ ಇಂದು ಏಪ್ರಿಲ್ ೧, All Fools Day (ಸರ್ವ ಮೂರ್ಖರ ದಿನ) ಆದದ್ದರಿಂದ ಭಕ್ತರೆಲ್ಲರನ್ನೂ ಮೂರ್ಖರನ್ನಾಗಿಸುವ ಸಂಚು ಹೂಡಿದ್ದಾರೆ. ಭಕ್ತರು ನೋಡುತ್ತಾರೆ, ಮಹಾರಾಜರು ಪೆರಾಂಬುರೇಟರಿನಲ್ಲಿ ಕುಳಿತು ಹಠಾತ್ತಾಗಿ ಅವರೆದುರಿಗೆ ಪ್ರತ್ಯಕ್ಷರಾಗಿದ್ದಾರೆ! ಎಲ್ಲರೂ ಆನಂದದಿಂದ ಮೈಮರೆತರು. ಮಹಾರಾಜರೂ ಸಹ ಮನಃಪೂರ್ತಿ ನಗುತ್ತಿದ್ದಾರೆ. ನಂತರ ಅವರು ಮಠದ ವಿವಿಧೆಡೆಗಳಲ್ಲಿ ಸುತ್ತಾಡಲು ಬಯಸಿದರು. ಸ್ವಾಮೀಜಿ ಮಂದಿರ, ಪೂಜ್ಯ ಬಾಬುರಾಮ್ ಮಹಾರಾಜ್, ಮಹಾಪುರುಷ ಮಹಾರಾಜ್ ಮೊದಲಾದವರ ಸಮಾಧಿ ಸ್ಥಳಗಳಿಗೆ ಹೋದರು. ಗಂಗೆಯ ಎದುರು ತೀರದಲ್ಲಿರುವ ಕಾಶೀಪುರ ಸ್ಮಶಾನವನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿದರು. ಮಠದ ಕಟ್ಟಡಕ್ಕೆ ಹಿಂತಿರುಗಿ ಅಡುಗೆ ಮನೆಯನ್ನು ನೋಡಿದರು. ನಂತರ ಹಿಂದಿನ ಕೊಠಡಿಯ ಕಡೆಯಿಂದ ತರಕಾರಿ ಹೆಚ್ಚುವ ವರಾಂಡಕ್ಕೆ ಬಂದರು. ಇದೇ ಅವರು ಕೆಳಗಿಳಿದ ಕೊನೆಯ ದಿನವಾಯಿತು. ಇದೇ ಕೊನೆಯ ಪೆರಾಂಬುರೇಟರ್ ಭ್ರಮಣ.

ಏಪ್ರಿಲ್ ೩ರ ನಂತರ ಎಷ್ಟೋ ತರಹದ ರೋಗದ ಚಿಹ್ನೆಗಳು ಕಂಡುಬಂದವು; ೮ರಂದು ಅವರನ್ನು ಪರೀಕ್ಷಿಸಿದ ವೈದ್ಯರೆಲ್ಲರೂ ಚಿಂತೆಗೊಳಗಾದರು. ಪ್ರಧಾನ ವೈದ್ಯರಾದ ಹರಿಹರಬಾಬುಗಳು ಬೆಳಗ್ಗೆ ೧೧ರಿಂದ ಸಂಜೆ ೫ರವರೆಗೆ ಮಠದಲ್ಲಿಯೇ ಇದ್ದರು. ಅಂತೂ ಎರಡು ದಿನಗಳ ನಂತರ ಈ ಕಂಟಕವು ಕಳೆಯಿತು. ಮಹಾರಾಜರ ಆರೋಗ್ಯ ದಾಖಲೆಯಲ್ಲಿ 'ಆರೋಗ್ಯವು ಬಹುಮಟ್ಟಿಗೆ ಸುಧಾರಿಸಿದೆ' ಎಂದು ವೈದ್ಯರ ಹೇಳಿಕೆಯನ್ನು ಬರೆಯಲಾಗಿತ್ತು.

ಉತ್ತಮಗೊಂಡಿದ್ದ ಆ ಆರೋಗ್ಯವು ತಾತ್ಕಾಲಿಕವಾದದ್ದಾಗಿತ್ತು. ಕೆಳಗಿಳಿಯುವುದು ದೂರದ ಮಾತು, ಮಂಚದಲ್ಲೂ ಎದ್ದು ಕುಳಿತುಕೊಳ್ಳುವ ಶಕ್ತಿ ಉಳಿದಿರಲಿಲ್ಲ. ಭಕ್ತರೊಬ್ಬರ ಉದಾರ ಸಹಾಯದಿಂದ ಇತ್ತ ಮಹಾರಾಜರ ಕೊಠಡಿಯನ್ನು ಹವಾ ನಿಯಂತ್ರಿತ ಕೊಠಡಿಯನ್ನಾಗಿ ಮಾರ್ಪಡಿಸಲಾಯಿತು. ಇದರಿಂದ ತೀವ್ರವಾದ ಬೇಸಿಗೆಯಲ್ಲಿ ಮಹಾರಾಜರು ಆರಾಮವಾಗಿರಲು ಸಾಧ್ಯವಾಯಿತು. ಮೇ ತಿಂಗಳ ಮೊದಲಲ್ಲಿ ಚೆನ್ನೈ ಮಠದ ಅಧ್ಯಕ್ಷರಾದ ಸ್ವಾಮಿ ಕೈಲಾಸಾನಂದರು ಬೇಲೂರು ಮಠಕ್ಕೆ ಬಂದರು. ವಿರಜಾನಂದರು ಅವರನ್ನು ಬಹುದಿನಗಳ ನಂತರ ಕಂಡದ್ದಕ್ಕೆ ತುಂಬ ಆನಂದ ವ್ಯಕ್ತಪಡಿಸಿದರು. ಬಹಳ ಆತ್ಮೀಯತೆಯಿಂದ ಹತ್ತಿರ ಕರೆದು ಸ್ವಲ್ಪ ಹೊತ್ತು ಮಾತನಾಡಿದರು. ವಿರಜಾನಂದರಿಂದ ದೀಕ್ಷೆ ಪಡೆದಿದ್ದ ಪ್ರಸಿದ್ಧ ಕೊಳಲು ವಾದಕ ಶ್ರೀ ಪನ್ನಾಲಾಲ್ ಘೋಷರು ಈ ಸಮಯದಲ್ಲಿ ಮಠದ ಅತಿಥಿ ಗೃಹದಲ್ಲಿ ಇಳಿದುಕೊಂಡಿದ್ದರು. ದಿನವೂ ಸಂಜೆ ಅವರು ಮಹಾರಾಜರ ಕೊಠಡಿಯಲ್ಲಿ ಸ್ವಲ್ಪ ಹೊತ್ತು ಕೊಳಲನ್ನು ನುಡಿಸುತ್ತಿದ್ದರು. ಮಹಾರಾಜರಿಗೆ ಇದು ತುಂಬ ಹಿಡಿಸುತ್ತಿತ್ತು.

ಮೇ ೭ರಂದು ಜ್ವರ ಅಧಿಕವಾಯಿತು, ಜೊತೆಜೊತೆಗೆ ಹೊಟ್ಟೆಯ ತೊಂದರೆಯೂ ಸಹ. ವೈದ್ಯರು ದ್ರವ ಪಥ್ಯವನ್ನಿತ್ತರು. ಇದಕ್ಕೆ ಮೊದಲೇ ಮೂಗಿನಿಂದ ಒಂದು ರಬ್ಬರ್ ನಳಿಕೆ ಇಳಿಬಿಟ್ಟು ಅದರ ಮೂಲಕ ನಿರಂತರ ಆಮ್ಲಜನಕ ಒದಗಿಸುವ ವ್ಯವಸ್ಥೆ ಮಾಡಿದ್ದರು. ಚುಚ್ಚುಮದ್ದಿನ ಮೇಲೆ ಚುಚ್ಚುಮದ್ದು ನಡೆಯುತ್ತಲೇ ಇತ್ತು. ಕೆಲವೊಂದು ದಿನ ೧೩-೧೪ರ ವರೆಗೂ ಸಹ. ನಾನಾ ಪ್ರಕಾರದ ಕಟು ಕಹಿಯ ಔಷಧಿಗಳು, ಲೇಪನಗಳು ಸಹ ಇದ್ದೇ ಇದ್ದವು. ಮಹಾರಾಜರು ರೋಗಯಾತನೆಯನ್ನೂ ಚಿಕಿತ್ಸೆಯ ಉಪಟಳವನ್ನೂ ತುಂಬ ಶಾಂತತೆಯಿಂದ ಸಹಿಸುತ್ತಿದ್ದರು.

ಕಾಮಾರಪುಕುರ ಪುಣ್ಯಭೂಮಿಯಲ್ಲಿ ಶ್ರೀರಾಮಕೃಷ್ಣ ಜನ್ಮಸ್ಥಾನದಲ್ಲಿ ಮಂದಿರದ ನಿರ್ಮಾಣವು ಪೂರ್ಣಗೊಂಡಿತ್ತು. ಶ್ರೀರಾಮಕೃಷ್ಣರ ಅಮೃತಶಿಲೆಯ ವಿಗ್ರಹವೂ ಅಣಿಯಾಗಿತ್ತು. ಮೇ ೧೧ರಂದು ವೈಶಾಖ ಶುಕ್ಲ ಪಂಚಮಿ ತಿಥಿಯಲ್ಲಿ, ಶಂಕರಾಚಾರ್ಯರ ಜನ್ಮದಿನದಂದು ಮಂದಿರದ ಪ್ರತಿಷ್ಠಾಪನೆಯಾಗಲಿತ್ತು. ಇದಕ್ಕಾಗಿ ಮಹೋತ್ಸವದ ಆಯೋಜನೆಯಾಗಿತ್ತು. ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರುಗಳಾದ ಸ್ವಾಮಿ ಶಂಕರಾನಂದರು ಮತ್ತು ಸ್ವಾಮಿ ವಿಶುದ್ಧಾನಂದರು ವಿರಜಾನಂದರಲ್ಲಿಗೆ ಬಂದು, ಅವರ ಶುಭಾಶೀರ್ವಾದಗಳನ್ನು ಪಡೆದು ಕಾಮಾರಪುಕುರಕ್ಕೆ ಹೊರಟರು. ಬೇಲೂರು ಮಠ ಮತ್ತು ಇತರ ಶಾಖಾ ಕೇಂದ್ರಗಳಿಂದಲೂ ಅನೇಕ ಸಾಧುಗಳು ಉತ್ಸವದಲ್ಲಿ ಪಾಲ್ಗೊ

ಳ್ಳಲು ಹೊರಟರು. ವಿರಜಾನಂದರು ತಮ್ಮ ಸೇವಕರೊಬ್ಬರಿಗೆ 'ಉತ್ಸವದವರೆಗೂ ನನ್ನ ಶರೀರ ಇರುತ್ತದೆಯೋ ಇಲ್ಲವೋ ನೋಡು' ಎಂದಿದ್ದರು.

ಉತ್ಸವದ ದಿನ ಮಹಾರಾಜರ ಆರೋಗ್ಯ ಆತಂಕ ಹುಟ್ಟಿಸು ವಂತಿದ್ದರೂ ಅವಘಡವೇನೂ ನಡೆಯಲಿಲ್ಲ. ಉತ್ಸವವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಂಡು ಆನಂದದಿಂದ ಮೇ ೧೨ಕ್ಕೆ ಶಂಕರಾನಂದರು ಹಿಂದಿರುಗಿ ಬಂದು, ವಿರಜಾನಂದರಿಗೆ ಉತ್ಸವದ ವಿವರಣೆಗಳನ್ನು ನೀಡಿದರು. ಮಹಾರಾಜರು ನಿರ್ಮಾಲ್ಯವನ್ನು ಕಣ್ಣಿಗೊತ್ತಿಕೊಂಡರು, ಮುಖದಲ್ಲಿ ಆಳವಾದ ತೃಪ್ತಿಯು ಹೊರಸೂಸಿತು.

ಮೇ ೧೩ರಂದು ಆರೋಗ್ಯವು ಚಿಂತಾಜನಕ ಸ್ಥಿತಿಗೆ ತಲುಪಿತು. ರಾತ್ರಿ ೩ ಗಂಟೆಗೆ ವೈದ್ಯರು ಹತಾಶರಾಗಿ 'ಜೀವವುಳಿಯುವ ಯಾವುದೇ ಆಸೆ ಇಲ್ಲ' ಎಂದು ತಿಳಿಸಿಬಿಟ್ಟರು. ಮಠದ ಸಾಧುಗಳು ಒಬ್ಬೊಬ್ಬರಾಗಿ ಅವರ ಶಯ್ಯೆಯ ಪಾರ್ಶ್ವದಲ್ಲಿ ಮೌನವಾಗಿ ಕುಳಿತು ಜಪ ಮಾಡತೊಡಗಿದರು. ಮಹಾಸಮಾಧಿಯನ್ನು ಪ್ರವೇಶಿಸಲಿರುವ ಮಹಾನ್ ಸಂನ್ಯಾಸಿಯು ಕಣ್ಮುಚ್ಚಿ ಪ್ರಶಾಂತ ಮೂರ್ತಿಯಂತೆ ಮಲಗಿದ್ದಾರೆ. ಸಂನ್ಯಾಸಿಗೆ ಮೃತ್ಯು ಮುಕ್ತಿಯ ದೂತ, ಪರಮಾಪ್ತ ಸ್ನೇಹಿತ.

ಆದರೆ ಆಶ್ಚರ್ಯಕರವಾದ ರೀತಿಯಲ್ಲಿ ಪರಿಸ್ಥಿತಿಯು ಬದಲಾಗಿ ಹೋಯಿತು. ಪ್ರಾತಃಕಾಲದಲ್ಲಿ ಮಹಾರಾಜರು ಕಣ್ಣು ಬಿಟ್ಟರು. 'ಇನ್ನೂ ಕೆಲವು ದಿನ ಈ ಭೂಮಿಯಲ್ಲಿರಬೇಕಾದ ಪ್ರಮೇಯವಿದೆ' ಎಂಬುದು ಶ್ರೀರಾಮಕೃಷ್ಣರ ಇಂಗಿತವೆ? ಆರೋಗ್ಯವಂತರಾಗುವ ಲಕ್ಷಣವೇನೂ ಇಲ್ಲದಿದ್ದರೂ ಸೇವಕರು ತಮ್ಮ ಹಿಂದಿನ ಸಂಕಟವನ್ನು ಮರೆತು ಎಂದಿನಂತೆಯೇ ಅವರ ಸೇವೆಯಲ್ಲಿ ತನ್ಮಯರಾಗಿದ್ದಾರೆ, ಚಿಕಿತ್ಸಕರೂ ಅಷ್ಟೆ. ಮಾರನೇ ದಿನ ವಿರಜಾನಂದರ ತೀವ್ರ ಅನಾರೋಗ್ಯದ ವಿಷಯವು ರೇಡಿಯೋದಲ್ಲಿಯೂ ಪ್ರಸಾರಗೊಂಡಿತು. ಅವರ ದರ್ಶನವನ್ನು ಕೊನೆಯದಾಗಿ ಪಡೆಯಲು ಭಕ್ತರೆಲ್ಲರೂ ಗುಂಪು ಗುಂಪಾಗಿ ಬೇಲೂರು ಮಠಕ್ಕೆ ಬರಲಾರಂಭಿಸಿದರು. ಮೊದಮೊದಲು ಎರಡು ವೇಳೆಯಲ್ಲಿ, ನಂತರ ನಾಲ್ಕು, ಆರು ವೇಳೆಗಳಲ್ಲಿ ಭಕ್ತರನ್ನು ಮಹಾರಾಜರ ಕೊಠಡಿಯವರೆಗೂ ಕರೆದೊಯ್ದು ದರ್ಶನ ಮತ್ತು ಪ್ರಣಾಮದ ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು. ಮಹಾರಾಜರ ಮೂಗಿನ ಒಂದು ಹೊಳ್ಳೆಯಲ್ಲಿ ಆಮ್ಲಜನಕದ ನಳಿಕೆ ಇದ್ದೇ ಇತ್ತು; ಈಗ ನೀರು ಮತ್ತು ಆಹಾರವನ್ನು ಹೊಟ್ಟೆಗೆ ತಲುಪಿಸುವ ಇನ್ನೊಂದು ನಳಿಕೆಯನ್ನು ಮತ್ತೊಂದು ಹೊಳ್ಳೆಗೂ ಅಳವಡಿಸಲಾಯಿತು. ಎರಡು ವಾರಕ್ಕೂ ಮಿಗಿಲಾಗಿ ಈ ರೀತಿ ಸಂಪೂರ್ಣ ನಿರಾಹಾರರಾಗಿ ಕೆಲವೊಮ್ಮೆ ನೀರನ್ನೂ ಸಹ ಕುಡಿಯದೆ, ಮಹಾಪ್ರಯಾಣಕ್ಕೆ ಅವರು ಮಾಡಿಕೊಂಡ ಸಿದ್ಧತೆಯು ತೀರಾ ಹೊಸದು. ಬಹುಶಃ ಇದು ಕೇವಲ ತಮ್ಮ ಪರಮ ಪ್ರೀತಿಗೆ ಪಾತ್ರರಾದ ಸಹಸ್ರಾರು ಮಕ್ಕಳಿಗೋಸ್ಕರವೇ ಎನಿಸುತ್ತದೆ. ಅಧ್ಯಾತ್ಮ ಜೀವನದ ಕರ್ಣಧಾರನೂ, ಪಿತನೂ ಆದ ಮಹಾರಾಜರ ದರ್ಶನಕ್ಕೆಂದು ದೂರ ದೂರದಿಂದ ಅಸಂಖ್ಯ ಸ್ತ್ರೀ-ಪುರುಷರು ನಿರಂತರ ಬೇಲೂರು ಮಠಕ್ಕೆ ಬರುತ್ತಲೇ ಇದ್ದರು.

ಕೊನೆಗೂ ಅಂತಿಮ ದಿನ ಬಂದಿತು. ದಣಿದ ಶಿಶುವು ತಾಯ ಮಡಿಲನ್ನು ಸೇರಿ ಪರಮಶಾಂತಿ ಪಡೆಯುವ ಚಿರವಾಂಛಿತ ದಿನ. ೧೯೫೧ರ ಮೇ ೩೦, ಬುಧವಾರ ಬ್ರಾಹ್ಮೀ ಮುಹೂರ್ತದಿಂದಲೇ ಮಠದ ಸಾಧು ಬ್ರಹ್ಮಚಾರಿಗಳು ಮಹಾರಾಜರ ಕೊಠಡಿಯಲ್ಲಿ ನೆರೆದು ಗಂಭೀರ ಸ್ವರದಿಂದ 'ಹರಿ ಓಂ ರಾಮಕೃಷ್ಣ' ಎಂದು ಉಚ್ಚರಿಸತೊಡಗಿದರು. ಸ್ವಾಮಿ ವಿಶುದ್ಧಾನಂದರು ಕೊನೆಗಳಿಗೆಯ ಒಂದು ಗಂಟೆಯ ಹಿಂದಷ್ಟೇ ಮಠಕ್ಕೆ ಹಿಂದಿರುಗಿದ್ದರು. ಅವರೂ ಸಹ ಮಹಾರಾಜರ ಮಂಚದ ಹತ್ತಿರ ಕುಳಿತು ಭಗವಂತನನ್ನು ಸ್ಮರಿಸಲಾರಂಭಿಸಿದರು. ಸ್ವಾಮಿ ಶಂಕರಾನಂದರೂ ಸಹ ಬೇಲೂರು ಮಠದಲ್ಲಿಯೇ ಇದ್ದರು. ಸಮಯಕ್ಕೆ ಮುಂಚಿತವಾಗಿಯೇ ಶ್ರೀರಾಮಕೃಷ್ಣರ ಪೂಜೆ ಮತ್ತು ನೈವೇದ್ಯಗಳು ನಡೆಯುವಂತೆ ಮಠದ ಹಿರಿಯರು ವ್ಯವಸ್ಥೆ ಮಾಡಿದ್ದರು; ಅದು ಸಹ ಮುಗಿಯಿತು. ಬೆಳಗ್ಗೆ ೬.೫೬ಕ್ಕೆ ವಿರಜಾನಂದರು ತಮ್ಮ ಕೊನೆಯುಸಿರೆಳೆದರು.

ಆ ವರ್ಷದ 'ಉದ್ಬೋಧನ' ಪತ್ರಿಕೆಯ ಆಷಾಢ ಮಾಸದ ಪ್ರತಿಯಿಂದ ಉದ್ಧೃತ:

''ಪೂಜನೀಯ ಸ್ವಾಮಿ ವಿರಜಾನಂದ ಮಹಾರಾಜರ ಮಹಾಸಮಾಧಿಯ ವಾರ್ತೆಯು ಪ್ರಾತಃಕಾಲ ಆಲ್ ಇಂಡಿಯಾ ರೇಡಿಯೋದಲ್ಲಿ ಪ್ರಸಾರವಾಗುತ್ತಲೇ ಅವರ ಅಂತಿಮ ದರ್ಶನಕ್ಕಾಗಿ ಅವರ ಸಹಸ್ರಾರು ಶಿಷ್ಯ-ಶಿಷ್ಯೆಯರು, ಭಕ್ತರೂ ಬೇಲೂರು ಮಠಕ್ಕೆ ಬರಲಾರಂಭಿಸಿದರು. ಬೆಳಗ್ಗೆ ೧೧.೩೦ಕ್ಕೆ ಎಲ್ಲರ ದರ್ಶನಕ್ಕಾಗಿ ಮಹಾರಾಜರ ಪವಿತ್ರ ಶರೀರವನ್ನು ಪುಷ್ಪಮಾಲೆಗಳಿಂದ ಅಲಂಕರಿಸಿ ಮಠದ ಪ್ರಾಂಗಣದಲ್ಲಿರುವ ಮಾವಿನ ಮರದ ಹತ್ತಿರ ಚಾಚಿದ ಛಾವಣಿಯಡಿ ಇರಿಸಲಾಯಿತು. ಅಲ್ಲಿ ಯಥಾವಿಹಿತ ರೀತಿಯಲ್ಲಿ ಆರತಿಯಾದ ನಂತರ ಭಕ್ತವೃಂದವು ಭಾರಾಕ್ರಾಂತ ಹೃದಯದಿಂದ ಒಬ್ಬೊಬ್ಬರಾಗಿ ಅವರ ಪಾದಕ್ಕೆ ಪುಷ್ಪಾರ್ಘ್ಯಗಳನ್ನು ನಿವೇದಿಸಿದರು. ಗಂಟೆ ೧೨.೫೦ಕ್ಕೆ ಸಂನ್ಯಾಸಿ ಬ್ರಹ್ಮಚಾರಿ ಮತ್ತು ಭಕ್ತ ವೃಂದವು ಮೆರವಣಿಗೆಯಲ್ಲಿ ಅವರ ಶರೀರವನ್ನು ತಂದು ಶ್ರೀರಾಮಕೃಷ್ಣ ಮಂದಿರದ ಪ್ರಧಾನ ಪ್ರವೇಶ ದ್ವಾರದಲ್ಲಿ ಸ್ವಲ್ಪ ಹೊತ್ತು ಇರಿಸಿದರು. ಅನಂತರ ಶ್ರೀಮಾತೆಯವರ ಮಂದಿರದ ಎದುರಿನ ಗಂಗಾಘಟ್ಟದಲ್ಲಿ ಆನುಷ್ಠಾನಿಕ ಕ್ರಿಯೆಗಳು ಸಮಾಪ್ತವಾದ ಮೇಲೆ ಅವರ ಪವಿತ್ರ ದೇಹವನ್ನು ಆಚಾರ್ಯ ಸ್ವಾಮಿ ವಿವೇಕಾನಂದರ ಸಮಾಧಿ ಮಂದಿರದ ಸಮ್ಮುಖದಲ್ಲಿ ಸ್ವಲ್ಪ ಹೊತ್ತು ಇರಿಸಲಾಯಿತು. ನಂತರ ಗಂಗಾತೀರದಲ್ಲಿ ಶ್ರೀರಾಮಕೃಷ್ಣ ಪಾರ್ಷದರ ಸಮಾಧಿಸ್ಥಾನದ ಪೂರ್ವಪ್ರಾಂತದಲ್ಲಿ ರಚಿಸಲಾಗಿದ್ದ ಚಿತಾಶಯ್ಯೆಯ ಹತ್ತಿರ ತಂದಾಗ ವಿಹಿತ ಕ್ರಿಯೆಗಳಿಂದ ೨.೧೫ಕ್ಕೆ ಚಿತೆಗೆ ಅಗ್ನಿಸ್ಪರ್ಶ ಮಾಡಲಾ

ಯಿತು. ಬಂದುಸೇರಿದ್ದ ಭಕ್ತರು ಚಿತೆಗೆ ತುಪ್ಪ ಎಳ್ಳು, ಜವೆಯಂತಹ ಮಂಗಳದ್ರವ್ಯಗಳನ್ನು ಆಹುತಿ ನೀಡಿದರು. ಅಪರಾಹ್ನ ೫.೪೫ಕ್ಕೆ ಅಂತ್ಯಕ್ರಿಯೆಯು ಸಮಾಪ್ತವಾಯಿತು. ಈ ಸಮಯದಲ್ಲಿ ಸವಿಸ್ತಾರ ಮಠದ ಪ್ರಾಂಗಣದಲ್ಲಿ ಶೋಕಾಕ್ರಾಂತರಾದ ಸಹಸ್ರಾರು ಭಕ್ತರು ನೆರೆದಿದ್ದರು. ಅಂತ್ಯಕ್ರಿಯೆಯು ಸಮಾಪ್ತವಾದ ಮೇಲೆ ಚಿತಾಭೂಮಿಯನ್ನು ಗಂಗಾಜಲದಿಂದ ತೊಳೆದು, ಪುಷ್ಪಮಾಲೆಗಳನ್ನು ಅಲ್ಲಿ ಹರಡಲಾಯಿತು.''

'ಉದ್ಬೋಧನ' ಶ್ರಾವಣ ಮಾಸದ ಪತ್ರಿಕೆಯಿಂದ ಉದ್ಧೃತ :

## ಬೇಲೂರು ಮಠದಲ್ಲಿ ಶ್ರೀಮತ್ ಸ್ವಾಮಿ ವಿರಜಾನಂದ ಮಹಾರಾಜರ ಸ್ಮೃತಿ ಪೂಜೆ

ಕಳೆದ ೨೭ನೇ ಜ್ಯೇಷ್ಠ ಮಾಸದಲ್ಲಿ ಮಹಾಸಮಾಧಿಸ್ಥರಾದ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ವಿರಜಾನಂದ ಮಹಾರಾಜರ ಸ್ಮೃತಿಪೂಜೆಯನ್ನು ನಿರಾಡಂಬರವಾಗಿ ಆಚರಿಸಲಾಯಿತು. ಇದರ ಅಂಗವಾಗಿ ಮಂಗಳಾರತಿ, ಭಜನೆ, ಶ್ರೀರಾಮಕೃಷ್ಣ ಮತ್ತು ಶ್ರೀಮಾತೆಯವರ ವಿಶೇಷ ಪೂಜೆ, ಶ್ರೀಮದ್ಭಾಗವತ ಪಠಣ ಮತ್ತು ಮಯನಾಡಾಲ್ ಸಂಪ್ರದಾಯದ ಸಂಕೀರ್ತನೆಯು ನಡೆಯಿತು. ಮಧ್ಯಾಹ್ನ ಸುಮಾರು ೭ ಸಾವಿರ ಭಕ್ತರು ಪ್ರಸಾದವನ್ನು ಸ್ವೀಕರಿಸಿದರು. ಸ್ವಾಮಿ ವಿರಜಾ ನಂದರು ವಾಸಿಸುತ್ತಿದ್ದ ಕೊಠಡಿಯನ್ನು ಪುಷ್ಪಗಳಿಂದ ಸುಂದರ ವಾಗಿ ಅಲಂಕರಿಸಿ, ಅವರ ಜೀವಿತಾವಧಿಯಲ್ಲಿ ಯಾವ ರೀತಿ ಯಲ್ಲಿ ಇರುತ್ತಿತ್ತೋ ಅದೇ ರೀತಿಯಲ್ಲಿ ಎಲ್ಲವನ್ನೂ ಇಡಲಾ ಗಿತ್ತು.... ಅವರ ನಶ್ವರ ದೇಹವನ್ನು ಆಹುತಿ ನೀಡಲಾದ ಸ್ಥಳ ದಲ್ಲಿ ರೇಷ್ಮೆಯ ಮೇಲ್ಹಾವಣಿಯನ್ನು ಹಾಕಿ, ಪುಷ್ಪದಿಂದ ಸುಂದರ ವಾಗಿ ಅಲಂಕರಿಸಲಾಗಿತ್ತು. ಭಕ್ತವೃಂದವು ಈ ಸ್ಥಳದಲ್ಲಿ ತಮ್ಮ ಅಂತರ್ನಿಹಿತ ಶ್ರದ್ಧೆಯನ್ನು ಸಮರ್ಪಿಸಿದರು.

ಸಂಜೆ ಸ್ವಾಮಿ ಯತೀಶ್ವರಾನಂದರ ಅಧ್ಯಕ್ಷತೆಯಲ್ಲಿ, ಮಠದ ಪ್ರಾಂಗಣದಲ್ಲಿ ಒಂದು ದೊಡ್ಡ ಸ್ಮೃತಿಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಸ್ವಾಮಿ ಗಂಭೀರಾನಂದರು ತಮ್ಮ ಮನೋಜ್ಞವಾದ ಭಾಷೆಯಲ್ಲಿ ಸ್ವಾಮಿ ವಿರಜಾನಂದರ ಜೀವನ ಮತ್ತು ಉಪದೇಶಗಳ ಬಗ್ಗೆ ಉಪನ್ಯಾಸವಿತ್ತರು. ಸಂಜೆಯಾದ ಮೇಲೆ ಮಂದಿರದಲ್ಲಿ ಡಾ. ಇಂದುಭೂಷಣ ಬಸುಗಳ ತಂಡದವರಿಂದ ಸಂಕೀರ್ತನೆಯು ನಡೆಯಿತು.

* * *

ಶ್ರೀರಾಮಕೃಷ್ಣರ ತಿರೋಧಾನದ ನಂತರ ಜನನಿ ಶಾರದಾದೇವಿ, ಯುಗಾಚಾರ್ಯ ಸ್ವಾಮಿ ವಿವೇಕಾನಂದ ಮತ್ತು ಗುರುಭಾಯಿಗಳ ಜೀವನ ಮತ್ತು ಸಾಧನೆಯ ಯಾವೊಂದು ಸ್ವರ್ಣಯುಗವು ರೂಪುಗೊಂಡು ನಿಧಾನವಾಗಿ ಪ್ರಸರಿಸುತ್ತಿತ್ತೋ ಅದರ ಒಬ್ಬ ಪ್ರತ್ಯಕ್ಷದರ್ಶಿಗಳಾಗಿದ್ದರು ಸ್ವಾಮಿ ವಿರಜಾನಂದರು. ಅವರ ೭೮ ವರ್ಷಗಳ ಸುದೀರ್ಘ ಜೀವನದಲ್ಲಿ ಆ ಯುಗದ ಬಹುಮುಖೀ ಶಕ್ತಿಯನ್ನು ಅವರು ಮತ್ತೆ ಮತ್ತೆ ಅನುಭವಿಸಿದ್ದರು. ಆ ಶಕ್ತಿಯ ಸಾರ್ಥಕತೆಗಾಗಿ ಯಥಾಶಕ್ತಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಇದಕ್ಕಾಗಿ ಅವರು ತಮ್ಮನ್ನು ತಾವು ಧನ್ಯರೆಂದು ಭಾವಿಸಿದ್ದರು.

ಸ್ವಾಮಿ ವಿವೇಕಾನಂದರ ಸಮಕಾಲೀನರಾದ ಇನ್ನೂ ಅನೇಕ ವಿಶಿಷ್ಟ ಸಂನ್ಯಾಸಿ ಮತ್ತು ಗೃಹೀಭಕ್ತರು ಶ್ರೀರಾಮಕೃಷ್ಣರ ನಂತರ ಆ ಯುಗದ ಬೆಳಕಿನಿಂದ ತಮ್ಮ ಜೀವನವನ್ನು ಪ್ರದೀಪ್ತಗೊಳಿಸಿ, ನಮ್ಮ ಮನಃಪಟಲದಲ್ಲಿ ಸ್ಮೃತಿಯ ರೇಖೆಯನ್ನು ತೀಡಿಹೋಗಿದ್ದಾರೆ. ಅವರಲ್ಲಿ ಯಾರೊಬ್ಬರನ್ನೂ ನಾವು ಮರೆಯಲಾರೆವು. ಅವರ ಪ್ರತಿಯೊಬ್ಬರ ಜೀವನವೂ ಯುಗಶಕ್ತಿಯ ಸಂರಕ್ಷಣೆಗೆ ಮತ್ತು ಸಂವರ್ಧನೆಗೆ ತಮ್ಮ ತಮ್ಮ ಕಾಣಿಕೆಯನ್ನು ನೀಡಿದೆ.

ಅತೀತದ ಸ್ಮೃತಿಯು ವರ್ತಮಾನವನ್ನು ಸ್ಪರ್ಶಿಸುತ್ತದೆ, ವರ್ತಮಾನವು ಹೊಸ ಚೈತನ್ಯವನ್ನು ಪಡೆದು ಭವಿಷ್ಯತ್ತನ್ನು ಸಾರ್ಥಕಗೊಳಿಸಲು ಮುಂದಾಗುತ್ತದೆ. ಅತೀತ-ವರ್ತಮಾನ-ಭವಿಷ್ಯತ್ ಈ ಮೂರು ಕಾಲದ ಆ ಸನಾತನ ಸಾಕ್ಷಿಪುರುಷನು ತನ್ನ ಸತ್ಯತೆಯಲ್ಲಿ ನಮ್ಮ ಆಕಾಂಕ್ಷೆ ಮತ್ತು ಕರ್ಮಗಳನ್ನು ನೆಲೆ

ಸುಮಾರು ನಾಲ್ಕೂವರೆ ವರ್ಷಗಳಿಂದ (ಆರಂಭ : ನವೆಂಬರ್, ೨೦೧೬) ಹರಿದು ಬಂದ **'ಕಳೆದ ದಿನಗಳ ನೆನಪುಗಳು'** ಎಂಬ ಈ ಧಾರಾವಾಹಿಯು ಈ ಸಂಚಿಕೆಯಲ್ಲಿ ಕೊನೆಗೊಳ್ಳುತ್ತಿದೆ. ಶ್ರೇಷ್ಠ ಸಂನ್ಯಾಸಿಯೊಬ್ಬರ ಈ ಜೀವನಚಿತ್ರವನ್ನು ಮೂಲ ಬಂಗಾಳಿ ಗ್ರಂಥ **'ಅತೀತೇರ್ ಸ್ಮೃತಿ'**ಯಿಂದ ಕನ್ನಡಕ್ಕೆ ಸುಲಲಿತವಾಗಿ ಅನುವಾದಿಸಿ ಕೊಟ್ಟ ಅನುವಾದಕರಿಗೆ ನಮ್ಮ ವಿಶೇಷ ಕೃತಜ್ಞತೆಗಳು.

— *ಸಂಪಾದಕ*

''ಹಾಸ್ಯವನ್ನು ಬಿಟ್ಟು ಒಮ್ಮೆ ಯೋಚಿಸಿ ನೋಡು. ನಿನಗೆ ಒಂದು ಸಾಸಿವೆಯಷ್ಟಾದರೂ ಗುರುವಿನಲ್ಲಿ ಶ್ರದ್ಧೆ ಪ್ರೇಮ ಅಥವಾ ಭಕ್ತಿಯಿದ್ದರೆ ನಿನ್ನ ಕೆಟ್ಟ ಕೃತ್ಯಗಳನ್ನು ಆತನ ಮೇಲೆ ಹೇರಿ ಅವರಿಗೆ ಯಾತನೆಯನ್ನು ಉಂಟುಮಾಡಲು ನಿನಗೆ ಮನಸ್ಸು ಬರುವುದೆ? ಆತನೇನು ಒಂದು ಗೊಬ್ಬರದ ಗುಂಡಿಯೆ? ಯಾರಿಗೆ ಪ್ರೇಮದ ಅರಿವೇ ಇಲ್ಲವೋ, ಯಾರು ಪೂರ್ಣ ಸ್ವಾರ್ಥಿಗಳೋ, ಪ್ರಾಪಂಚಿಕ ವಸ್ತುಗಳ ಮೇಲೆ ವ್ಯಾಮೋಹವಿದೆಯೋ ಅಂತಹವರು ಮಾತ್ರ ಇಷ್ಟು ನೀಚರಾಗಬಹುದು.. ಯಾರಿಗೆ ಗುರುವಿನಲ್ಲಿ ನಿಶ್ಚಲ ಶ್ರದ್ಧೆ ಮತ್ತು ಪ್ರೀತಿ ಇದೆಯೋ ಅಂತಹವರು ಪುನಃ ಪಾಪ ಮಾಡುವುದಿಲ್ಲ.'' — *ಸ್ವಾಮಿ ವಿರಜಾನಂದ*

('ಪರಮಾರ್ಥ ಪ್ರಸಂಗ' ಗ್ರಂಥದಿಂದ)